# ರಾಷ್ಟ್ರಮಟ್ಟದ ಗೇರು ಕೃಷಿಕರ ಸಂಘಟನೆಗಾಗಿ ಅಖಿಲ ಭಾರತ ಗೇರು ಬೆಳೆಗಾರರ ಸಂಘದ ನೋಂದಣಿ



ಪುತ್ತೂರು: ಗೇರು ಕೃಷಿಕರ ಸಮಸ್ಯೆ, ಬೇಡಿಕೆ ಮತ್ತು ಯಾವ ರೀತಿಯ ಕೃಷಿಯಿಂದ ಹೆಚ್ಚು ಬೆಳೆ ಪಡೆಯಲು ಸಾಧ್ಯ ಎಂಬ ಕುರಿತು ಅರಿವು ಹಾಗೂ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ರಾಷ್ಟ್ರಮಟ್ಟದಲ್ಲಿ ಗೇರು ಕೃಷಿಕರ ಸಂಘಟನೆ ಆಗಬೇಕೆಂಬ ಹಲವು ವರ್ಷಗಳ ಕನಸಿನಂತೆ ರಾಷ್ಟ್ರೀಯ ಗೇರು ಸಂಶೋಧನಾ ನಿರ್ದೇಶನಾಲಯದ ಪ್ರೋತ್ಸಾಹದೊಂದಿಗೆ ಅಖಿಲ ಭಾರತ ಗೇರು ಬೆಳೆಗಾರರ ಸಂಘದ ನೊಂದಣಿಯನ್ನು ಜ.22ರಂದು ಪುತ್ತೂರು ಸಬ್‌ರಿಜಿಸ್ಟರ್ ಕಚೇರಿಯಲ್ಲಿ ಮಾಡಲಾಗಿದೆ ಎಂದು ಅಖಿಲ ಭಾರತ ಗೇರು ಬೆಳೆಗಾರರ ಸಂಘದ ಅಧ್ಯಕ್ಷ ನನ್ಯ ಅಚ್ಚುತ ಮೂಡೆತ್ತಾಯ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಗೇರು ಕೃಷಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದ ಕೃಷಿಯಾದರೂ ಅತ್ಯಂತ ಮಹತ್ವಪೂರ್ಣವಾದ ಬೆಳೆ. ಆರೋಗ್ಯದ ದೃಷ್ಟಿಯಲ್ಲಿ ಎಲ್ಲದಕ್ಕೂ ಅವಶ್ಯಕತೆ ಇರುವ ಆಹಾರ. ಗೇರು ಕೃಷಿಕರ ಯಾವುದೇ ಸಂಘಟನೆಗಳು ಈ ತನಕ ಇರಲಿಲ್ಲ. ಈ ನಿಟ್ಟಿನಲ್ಲಿ ಗೇರು ಬೆಳೆಗಾರರ ಸಮಸ್ಯೆ, ಬೇಡಿಕೆಗಳನ್ನು ಸರಕಾರಕ್ಕೆ ತಿಳಿಸುವ ಮತ್ತು ಕೃಷಿಗಳ ಕುರಿತು ಸಂವಹನ ಮಾಡಲು ಒಳ್ಳೆಯ ಕೃಷಿ ಹೇಗೆ ಮಾಡಬೇಕು. ಹೇಗೆ ಹೆಚ್ಚು ಬೆಳೆ ಪಡೆಯಬಹುದು ಮತ್ತು ವೈಜ್ಞಾನಿಕವಾಗಿ ಹೇಗೆ ಬೆಳೆಸಬಹುದು ಎಂಬ ರೀತಿಯ ಅರಿವು ಮೂಡಿಸುವ ನಿಟ್ಟಿನಲ್ಲಿ ಅಖಿಲ ಭಾರತ ಗೇರು ಬೆಳೆಗಾರರ ಸಂಘಟನೆ ಆಗಬೇಕೆಂಬ ಅನೇಕ ವರ್ಷಗಳ ಚಿಂತನೆಯಂತೆ ಅದಕ್ಕೆ ಸಮಯ ಕೂಡಿ ಬಂದಿದೆ ಎಂದ ಅವರು ಗೇರು ಕೃಷಿ ರಾಷ್ಟ್ರಮಟ್ಟದಲ್ಲಿ ಬೇರೆ ಬೇರೆ ದೇಶದಲ್ಲಿ ಆಗುತ್ತಿದೆ. ಯಾವುದೇ ಬಂಜರು ಭೂಮಿಯಲ್ಲಿಯೂ ಬೆಳೆಯುವ ಬೆಳೆಯಾದ್ದರಿಂದ ಇದನ್ನು ಯಾವುದೇ ಶ್ರಮ ಇಲ್ಲದೆ ಹೆಚ್ಚು ಬೆಳೆ ಪಡೆಯಬಹುದು ಎಂದರು. ಇವತ್ತು ಗೇರು ಬೀಜಕ್ಕೆ ಬೇಡಿಕೆ ಇದ್ದರೂ ಬೇಕಾದಷ್ಟು ಉತ್ಪಾದನೆ ಆಗುತ್ತಿಲ್ಲ. ಈ ನಡುವೆ ವಿದೇಶದಿಂದ ಕಳಪೆ (4ನೇ ಪುಟಕ್ಕೆ)

## ನೋಂದಣಿ ಆದ ದಿನವೇ ಪ್ರಥಮ ಸಭೆ

**ಅಖಿಲ ಭಾರತ ಗೇರು ಬೆಳೆಗಾರರ ಸಂಘದ ನೊಂದಣಿ ಜ.22ರಂದು ಪುತ್ತೂರು ನೊಂದಣಿ ಕಚೇರಿಯಲ್ಲಿ ಆದ ತಕ್ಷಣ ದರ್ಬೆ ಸರಸ್ವತಿ ಸೌಹಾರ್ದ ಸಹಕಾರಿ ಸಂಘದ ಸಭಾಭವನದಲ್ಲಿ ಪ್ರಥಮ ಸಭೆ ನಡೆಸಲಾಯಿತು. ಸಭೆಯಲ್ಲಿ ಹಿರಿಯ ವಿಜ್ಞಾನಿ ಡಾ. ಮೋಹನ್, ಡಿಸಿಆರ್‌ನ ನಿರ್ದೇಶಕ ಡಾ. ಎಮ್.ಜಿ. ನಾಯಕ್ ಅವರ ಉಪಸ್ಥಿತಿಯಲ್ಲಿ ಸಂಘದ ಅಧ್ಯಕ್ಷ ನನ್ಯ ಅಚ್ಚುತ ಮೂಡೆತ್ತಾಯ, ಉಪಾಧ್ಯಕ್ಷ ಶಂಕರನಾರಾಯಣ ಖಂಡಿಗೆ, ಖಜಾಂಜಿ ಸುಭಾಸ್ ರೈ ಕಡಮಜಲು, ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ, ಜಂಟಿ ಕಾರ್ಯದರ್ಶಿ ವಿಲಾಸ್ ಅನಂತ ರಾವ್, ಟ್ರಸ್ಟಿಗಳಾದ ವಾಸವನ್, ಸೋಮೇಶ್ವರ ರಾವ್, ಸಿದ್ಧಪ್ಪ, ಕಾಶ್ಮೀರ್ ಕುಟಿನೋ, ಚಂದ್ರಶೇಖರ ಉಡುಪ, ನಟೇಶ್ ಮೂಡಾಯುರು, ಸುಕನ್ಯಾ ಉಪಸ್ಥಿತರಿದ್ದರು.**

# ರಾಷ್ಟ್ರಮಟ್ಟದ ಗೇರು ಕೃಷಿಕರ ಸಂಘಟನೆಗಾಗಿ ಅಖಿಲ ಭಾರತ ಗೇರು ಬೆಳೆಗಾರರ ಸಂಘದ ನೋಂದಣಿ

(ಒಂದನೇ ಪುಟದಿಂದ)

ಗುಣಮಟ್ಟದ ಬೀಜಗಳು ಬರುತ್ತಿರುವುದರಿಂದ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಗೇರು ಬೀಜ ಆಮದನ್ನು ತಡೆಯುವುದು ಅಥವಾ ಹೆಚ್ಚಿನ ಸುಂಕ ಹೇರುವ ಕುರಿತು ಸರಕಾರದ ಮಟ್ಟದಲ್ಲಿ ಮಾತನಾಡಬೇಕಾಗಿದೆ. ನಮ್ಮ ಸಂಘದ ವ್ಯಾಪ್ತಿ ಅಖಿಲ ಭಾರತ ಮಟ್ಟದಲ್ಲಿ ಇರುವ ನಿಟ್ಟಿನಲ್ಲಿ ಸಂಘದ ಜಂಟಿ ಕಾರ್ಯದರ್ಶಿಯಾಗಿ ಮಹಾಷ್ಟ್ರದ ವಿಲಾಸ ಅನಂತರಾವ್ ಠಾಕೂರ್, ಟ್ರಸ್ಟಿಗಳಾಗಿ ಗೇರು ಬೆಳೆಗಾರರ ಸಂಘದ ಕೇರಳದ ವಾಸವನ್, ಆಂದ್ರಪ್ರದೇಶದ ಸೋಮೇಶ್ವರ ರಾವ್, ಗದಗದ ಸಿದ್ದಪ್ಪ, ಪುತ್ತೂರಿನ ಕಾಶ್ಮೀರ್ ಕುಟಿನ್ಹಾ, ಉಡುಪಿಯ ಚಂದ್ರಶೇಖರ ಉಡುಪ, ಈಶ್ವರಮಂಗಲದ ನಟೇಶ್ ಮೂಡಾಯೂರುರವರು ಕಾರ್ಯನಿರ್ವಹಿಸಲಿದ್ದಾರೆ ಎಂದು ಅವರು ಹೇಳಿದರು.

**ಗೇರು ಉತ್ಪನ್ನಗಳ ಸಂಸ್ಕರಣೆ:** ಇವತ್ತಿನ ಕಾಲದಲ್ಲಿ ಅಡಿಕೆ ಗಿಡ ಇಡುವು ದಾದರೆ ಲಕ್ಷಾಂತರ ರೂಪಾಯಿ ಖರ್ಚು ಇದೆ. ಅದೇ ಗೇರು ಕೃಷಿ ಮಾಡಲು ಕಡಿಮೆ ವೆಚ್ಚ ಸಾಕು. ಕ್ಯಾಂಪ್ಕೋ ಚಾಕಲೇಟು ಕಾರ್ಖಾನೆಯ ಮೂಲಕ ಕೋಕೊಗೆ ಹೇಗೆ ಧಾರಣೆ ಬಂತೋ ಅದೇ ರೀತಿ ಗೇರು ಹಣ್ಣಿನ ಉತ್ಪನ್ನಗಳನ್ನು ಬೇರೆ ಬೇರೆ ರೀತಿಯಲ್ಲಿ ಸಂಸ್ಕರಣೆ ಮಾಡುವ ವ್ಯವಸ್ಥೆಗೆ ಚಿಂತನೆ ನಡೆಸಲಾಗುವುದು ಎಂದು ನನ್ಯ ಅಚ್ಚುತ ಮೂಡೆತ್ತಾಯ ಹೇಳಿದರು.

**ಕ್ಯಾಂಪ್ಕೋದಿಂದಲೂ ಗೇರು ಬೀಜ ಖರೀದಿ:** ಕ್ಯಾಂಪ್ಕೋ ಉಪಾಧ್ಯಕ್ಷ ಕಾಸರಗೋಡು ಗೇರು ಬೆಳೆಗಾರರ ಸಂಘದ ಉಪಾಧ್ಯಕ್ಷ ಶಂಕರನಾರಾಯಣ ಭಟ್ ಖಂಡಿಗೆರವರು ಮಾತನಾಡಿ, ಕ್ಯಾಂಪ್ಕೋ ಬೈಲಾದಲ್ಲೂ ತೆಂಗು ಮತ್ತು ಗೇರು ಖರೀದಿ ಮಾಡಿ ಸಂಸ್ಕರಣೆ ಮಾಡುವ ಕುರಿತು ಚರ್ಚಿಸಲಾಗಿದೆ. ಅಡಿಕೆ, ಗೇರು ಮತ್ತು ತೆಂಗು ಕೃಷಿಗೆ ಒಂದೇ ಸೂರಿನಡಿಯಲ್ಲಿ ಕ್ಯಾಂಪ್ಕೋ ಖರೀದಿಗೆ ಮುಂದೆ ಬಂದಿದೆ ಎಂದು ಅವರು ಹೇಳಿದರು.

**ಮಧ್ಯವರ್ತಿಗಳ ಹಾವಳಿ ತಪ್ಪಿಸುವ ಉದ್ದೇಶ:** ಅಖಿಲ ಭಾರತ ಗೇರು ಬೆಳೆಗಾರರ ಸಂಘದ ಖಜಾಂಚಿಯಾಗಿರುವ ಪ್ರಗತಿಪರ ಕೃಷಿಕ ಸುಭಾಸ್ ರೈ ಕಡಮಜಲು ರವರು ಮಾತನಾಡಿ, ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಸಹಕಾರ ಸಂಘಗಳ ಮೂಲಕ ರೈತರಿಗೆ ಸರಿಯಾದ ಬೆಲೆ ಸಿಗಬೇಕೆಂಬುದು ನಮ್ಮ ಉದ್ದೇಶ ಎಂದರು.

**ಪ್ರಧಾನಿಯವರಿಗೆ ಟ್ವಿಟ್ಟರ್ ಮೂಲಕ ಬೇಡಿಕೆ:** ಅಖಿಲ ಭಾರತ ಗೇರು ಬೆಳೆಗಾರರ ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆರವರು ಮಾತನಾಡಿ ಸಂಘ ಟನೆ ಈಗಾಗಲೇ ಕಾರ್ಯಪ್ರವೃತ್ತವಾಗಿದ್ದು, ಪ್ರಧಾನಿಯವರ ಕಾರ್ಯಾಲಯಕ್ಕೆ ಟ್ವೀಟ್ ಮೂಲಕ ಮೂರು ಬೇಡಿಕೆಗಳನ್ನು ರವಾನಿಸಿದೆ. 1 ಕೆ.ಜಿ. ಕಚ್ಚಾ ಗೇರು ಬೀಜಕ್ಕೆ ಕನಿಷ್ಠ ರೂ. 150 ಬೆಂಬಲ ಬೆಲೆ ಘೋಷಿಸಬೇಕು. ಆಫ್ರಿಕಾ ವಿಯಟ್ನಾಮ್ ಮತ್ತಿತರ . ದೇಶಗಳಿಂದ ಆಮದಾಗುತ್ತಿರುವ ಕಚ್ಚಾ ಗೇರು ಬೀಜ ಮೇಲೆ ಶೇ.8 ಆಮದು ಸುಂಕ ವಿಧಿಸಬೇಕು. ಭಾರತೀಯ ಗೇರು ಬೀಜಕ್ಕಿಂತ ಕಳಪೆ ಗುಣಮಟ್ಟ ಹೊಂದಿರುವ ಸಂಸ್ಕರಿತ ಗೇರು ಬೀಜವನ್ನು ವಿಯೆಟ್ನಾಂ ಮತ್ತಿತರ ದೇಶಗಳಿಂದ ತರಿಸುವುದನ್ನು ನಿಲ್ಲಿಸಬೇಕು. ಇದನ್ನು ಸರಕಾರ ಕಾರ್ಯರೂಪಕ್ಕೆ ತಂದರೆ ಗೇರು ಬೆಳೆಗಾರರಿಗೆ ಅನುಕೂಲವಾಗಲಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಬೆಳ್ತಂಗಡಿಯ ಸುಕನ್ಯಾ ಉಪಸ್ಥಿತರಿದ್ದರು.

# ಅಖಿಲ ಭಾರತ ಗೇರು ಬೆಳೆಗಾರರ ಸಂಘ ಅಸ್ತಿತ್ವಕ್ಕೆ

**ಸಾಗರ** ಜ. 22: ಗೇರು ಕೃಷಿ ಜನಪ್ರಿಯವಾಗುತ್ತಿದ್ದರೂ ದರ ಕುಸಿತ, ಮಧ್ಯವರ್ತಿಗಳ ಹಾವಳಿ, ಕೃಷಿಕರ ಕುರಿತು ಸರಕಾರದ ಮಟ್ಟದಲ್ಲಿ ಧ್ವನಿ ಎತ್ತುವ ಸಲುವಾಗಿ ಅಖಿಲ ಭಾರತ ಗೇರು ಬೆಳೆಗಾರರ ಸಂಘವೊಂದನ್ನು ರಚಿಸಲಾಗಿದ್ದು ಸಂಘದ ನೋಂದಾವಣೆ ಕಾರ್ಯ ಜ. 23ರಂದು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ನಸ್ಯ ಅಚ್ಯುತ ಮೂಡೆತ್ತಾಯ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹತ್ವ ಹೊಂದಿರುವ ಗೇರು ಕೃಷಿ ನಿರ್ಲಕ್ಷ್ಯಕ್ಕೊಳಗಾಗಿದೆ. ದೇಶಾದ್ಯಂತ ಗೇರು ಕೃಷಿಗೆ ಬೇಡಿಕೆಯಿದ್ದರೂ ಅದಕ್ಕೆ ತಕ್ಕಂತೆ ಉತ್ಪಾದನೆ ಆಗುತ್ತಿಲ್ಲ. ಈ ನಿಟ್ಟಿನಲ್ಲಿ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಿ, ರಾಷ್ಟ್ರೀಯ ಗೇರು ಸಂಶೋಧನ ಕೇಂದ್ರದ ಪ್ರೇರಣೆಯಿಂದ ಸಂಘವನ್ನು ಸ್ಥಾಪಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ಮಟ್ಟದಲ್ಲಿಗೇರು ಬೆಳೆಗಾರರಿಗೆ ಧ್ವನಿಯಾಗುವುದು, ವಿವಿಧ ಸಂಘ ಸಂಸ್ಥೆಗಳ ಹಾಗೂ ಇಲಾಖೆಗಳ ನಡುವಿನ ಸಂವಹನ ಬೆಳೆಸುವುದು, ವೈಜ್ಞಾನಿಕ ಗೇರು ಕೃಷಿಯ ಕುರಿತು ಜಾಗೃತಿ ಹಾಗೂ ಸಂಸ್ಕರಣ ಮಾಹಿತಿಯನ್ನು ರೈತರಿಗೆ ತಲುಪಿಸುವುದು, ರೈತ ಉತ್ಪಾದಕ ಕಂಪೆನಿಗಳನ್ನು ಉತ್ತೇಜಿಸುವುದು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಉತ್ತೇಜನ ನೀಡುವುದರ ಜತೆಗೆ ಗೇರು ಬೆಳೆಯ ಮೇಳಗಳನ್ನು ಹಮ್ಮಿಕೊಳ್ಳುವುದು ಸಂಘದ ಉದ್ದೇಶವಾಗಿದೆ ಎಂದು ಹೇಳಿದರು.

ಕೆ.ಜಿ. ಕಚ್ಚಾ ಗೇರುಬೀಜಕ್ಕೆ ಕನಿಷ್ಠ 150 ರೂ. ಬೆಂಬಲ ಬೆಲೆ ಘೋಷಿಸಬೇಕು. ಆಫ್ರಿಕಾ ಮತ್ತಿತರ ದೇಶಗಳಿಂದ ಆಮದಾಗುತ್ತಿರುವ ಕಚ್ಚಾ ಗೇರುಬೀಜದ ಮೇಲೆ ಶೇ. 8 ಆಮದು ಸುಂಕ ವಿಧಿಸಬೇಕು ಹಾಗೂ ಭಾರತೀಯ ಗೇರು ಬೀಜಕ್ಕಿಂತ ಕಳಪೆ ಗುಣಮಟ್ಟದ ಸಂಸ್ಕರಿತ ಗೇರು ಬೀಜವನ್ನು ವಿಯೆಟ್ನಾಂ ಮತ್ತಿತರ ದೇಶಗಳಿಂದ ತರಿಸುವುದನ್ನು ನಿಲ್ಲಿಸಬೇಕು ಎನ್ನುವ ಮೂರು ಬೇಡಿಕೆಗಳನ್ನು ಪ್ರಧಾನಿ ಕಾರ್ಯಾಲಯಕ್ಕೆ ಟ್ವಿಟ್ಟರ್ ಮೂಲಕ ನೀಡಲಾಗಿದೆ ಎಂದು ತಿಳಿಸಿದರು.

ಕ್ಯಾಂಪ್ಕೋ ಉಪಾಧ್ಯಕ್ಷ ಶಂಕರನಾರಾಯಣ ಭಟ್ ಖಂಡಿಗೆ ಮಾತನಾಡಿ, ಸಮಗ್ರ ಕೃಷಿಯಲ್ಲಿ ರೈತರಿಗೆ ಒತ್ತು ನೀಡುವ ನಿಟ್ಟಿನಲ್ಲಿ ತೆಂಗು, ಗೇರು ಖರೀದಿ ಮಾಡಲು ಕ್ಯಾಂಪ್ಕೋ ಸಂಸ್ಥೆಯ ಮಹಾಸಭೆಯಲ್ಲಿ ಒಪ್ಪಿಗೆ ನೀಡಿದೆ. ಇದನ್ನು ಕಾರ್ಯರೂಪಕ್ಕೆ ತರುವುದೊಂದೇ ಬಾಕಿ ಇದೆ ಎಂದರು. ಸಂಘದ ಕಾರ್ಯದರ್ಶಿ ದೇವಿಪ್ರಸಾದ್ ಕಲ್ಲಾಜೆ, ನಿರ್ದೇಶಕ ಸುಭಾಸ್ ರೈ ಕಡಮಜಲು, ಟ್ರಸ್ಟಿ ಸುಕನ್ಯಾ ಮತ್ತಿತರರು ಉಪಸ್ಥಿತರಿದ್ದರು.